22-8-85ರಲ್ಲಿ ತಿಳಿಸಿರುವಂತೆ ಮೃತ ನೌಕರರ ಅವಲಂಭಿತರಿಗೆ 3 ತಿಂಗಳೊಳಗಾಗಿ ನೇಮಕ ಮಾಡಲು ಸಾಧ್ಯವಾಗುತ್ತಿಲ್ಲ. ಇತರೆ ಇಲಾಖೆಯಲ್ಲಿ ಗ್ರೂಪ್-ಸಿ ಹುದ್ದೆಗಳ ಬಗ್ಗೆ ವಿವಿಧ ಇಲಾಖಾ ಮುಖ್ಯಸ್ಥರೊಡನೆ ನಾವು ಈಗಾಗಲೇ ಪತ್ರ ವ್ಯವಹಾರ ನಡೆಸಿದ್ದೇವೆ. ಖಾಲಿ ಹುದ್ದೆಗಳ ಮಾಹಿತಿ ಕೆಲವು ಇಲಾಖೆಗಳಿಂದ ಬಂದಿದೆ, ಕೆಲವು ಇಲಾಖೆಗಳಿಂದ ಬಂದಿಲ್ಲ. ಆದುದರಿಂದ ಅದರ ಬಗ್ಗೆ ನಾವು ಅವರ ಜೊತೆಯಲ್ಲಿ ಪುನಃ ಸಮಾಲೋಚನೆ ಮಾಡಿ. ಉಳಿದ ಇಲಾಖೆಗಳಲ್ಲಿ ಗ್ರೂಪ್-ಸಿ ಹುದ್ದೆಗಳಿಗೆ ನೇಮಕಾತಿ ಮಾಡಲಿಕ್ಕೆ ಎಲ್ಲ ಪ್ರಯತ್ನಗಳನ್ನು ನಾವು ಮಾಡುತ್ತೇವೆ.

2) ಮೂಡಿಗೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ವಿದ್ಯುತ್ ಶಾಕ್‌ನಿಂದ ಸತ್ತವರಿಗೆ ಪರಿಹಾರ ಕೊಡುವುದು.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಹಾಗೂ ಚಿಕ್ಕಮಗಳೂರು ತಾಲ್ಲೂಕಿನ ಅಲ್ಲೂರಿನಲ್ಲಿ ವಿದ್ಯುತ್ ಶಾಕ್ ತಗುಲಿ 1987 ರಿಂದ ಇಲ್ಲಿಯತನಕ ಸತ್ತಿರುವವರು ಸುಮಾರು 18 ಜನರು. ಇವರ ಕುಟುಂಬಗಳಿಗೆ ವಿದ್ಯುತ್ ಇಲಾಖೆಯಿಂದ ಪರಿಹಾರವನ್ನು ಕೊಡದೇ ಈ ಕುಟುಂಬದವರು ಬಹಳ ಕಷ್ಟದಲ್ಲಿ ಸಿಲುಕಿರುತ್ತಾರೆ. ಹೆಚ್ಚು ಕಡಿಮೆ ಇವರೆಲ್ಲಾ ಬಡವರೇ ಆಗಿರುತ್ತಾರೆ. ಆದುದರಿಂದ ಈ ನೊಂದ ಕುಟುಂಬದವರಿಗೆ ಕೂಡಲೇ ಪರಿಹಾರವನ್ನು ಒದಗಿಸುವಂತೆ ಹಾಗೂ ಜನರಲ್ ಇನ್‌ಶ್ಯೂರೆನ್ಸ್ ಪಾಲಿಸಿ ಮೂಲಕ ವಿದ್ಯುತ್ ಶಾಕ್‌ನಿಂದ ಸತ್ತವರ ಕುಟುಂಬದವರಿಗೆ ಪರಿಹಾರ ಕೊಡಲು ಕವರ್ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ, 1987 ಏಪ್ರಿಲ್ ತಿಂಗಳಿಂದ 1990ರ ಫೆಬ್ರವರಿ ತಿಂಗಳ ಅಂತ್ಯದವರೆಗೆ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ 6 ವ್ಯಕ್ತಿಗಳ ಬಗ್ಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಇದೇ ಅವಧಿಯಲ್ಲಿ ಚಿಕ್ಕಮಗಳೂರು ತಾಲ್ಲೂಕಿನಲ್ಲಿ 12 ಇಲಾಖೇತರ ವ್ಯಕ್ತಿಗಳು ವಿದ್ಯುತ್ ಅಪಘಾತದಲ್ಲಿ ದುರ್ಮರಣಕ್ಕೆ ಈಡಾಗಿರುತ್ತಾರೆ. ಅವರ ವಿವರಗಳು ಈ ರೀತಿ ಇವೆ. ಇದರಲ್ಲಿ ಹೆಸರು ಎಲ್ಲಾ ಇದೆ. ಆಮೇಲೆ ಹೆಸರಿನ ಜೊತೆ ವಿವರಗಳನ್ನು ನಾನು ಅವರಿಗೆ ಕಳುಹಿಸಿ ಕೊಡುತ್ತೇನೆ. ವಾರಸುದಾರರಿಗೆ ಪರಿಹಾರ ಹಣವನ್ನು ನಾವು ಕೊಡಬೇಕು ಎನ್ನುವ ತೀರ್ಮಾನವನ್ನು ಮಾಡಿದ್ದೇವೆ. ಅದನ್ನು ಕೊಡತಕ್ಕ ಕೆಲಸವನ್ನು ಕೂಡಾ ನಾವು ಮಾಡುತ್ತೇವೆ. ಕರ್ನಾಟಕ ವಿದ್ಯುತ್ ಮಂಡಲಿಯಲ್ಲಿನ ಪರಿವೀಕ್ಷಕರು ಏನು ಇದ್ದಾರೆ, ಅವರು 18 ಜನರಲ್ಲಿ ಇಬ್ಬರಿಗೆ ಕೊಡಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದಾರೆ. ಉಳಿದವರಿಗೆ ಕೊಡಬಾರದು ಎಂದಲ್ಲ ಅದನ್ನೂ ಕೂಡಾ ಪರಿಶೀಲನೆ ಮಾಡುತ್ತಿದ್ದಾರೆ. ಅದರ ಬಗ್ಗೆ ನಾವು ವರದಿಗೋಸ್ಕರ ಕಾಯುತ್ತಿದ್ದೇವೆ.

ಈ ಮಧ್ಯೆ ಮಧ್ಯಂತರವಾಗಿ ಆ ರೀತಿ ತೀರಿಕೊಂಡವರ ವಾರಸುದಾರರಿಗೆ 5 ಸಾವಿರ ರೂಪಾಯಿ ಕೊಡಬೇಕೆಂಬ ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಆ ರೀತಿಯಾಗಿ ಕೊಡಬೇಕೆಂಬುದನ್ನು ಮಂಗಳೂರು ವಲಯದ ಮುಖ್ಯ ಅಭಿಯಂತರರಿಗೆ ನಿರ್ದೇಶನವನ್ನು ಈಗಾಗಲೇ ಕೊಟ್ಟಿದ್ದೇನೆ. ಮೊದಲು 5-5 ಸಾವಿರ ರೂಪಾಯಿಗಳನ್ನು ಕೊಟ್ಟುಬಿಡಿ ಆಮೇಲೆ ಕೊನೆಯಲ್ಲಿ ತೀರ್ಮಾನ ಮಾಡಿ ಉಳಿದಿರತಕ್ಕಂತಹ ಹಣವನ್ನು ಕೊಡಬಹುದು ಎಂಬ ವಿಚಾರವನ್ನೂ ನಾವು ತಿಳಿಸಿದ್ದೇವೆ. ಇನ್ನು ಉಳಿದಿರತಕ್ಕಂತಹ ಹಣವನ್ನು ಕೂಡ ಶೀಘ್ರವಾಗಿ ಕೊಡತಕ್ಕಂತಹ ತೀರ್ಮಾನವನ್ನು ನಾವು ಮಾಡುತ್ತೇವೆ.